ಕರ್ನಾಟಕ ಸರ್ಕಾರ

**ನಿರ್ದೇಶಕರ ಕಛೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-12**

**ಇ-ಮೇಲ್: commissioner.pue@gmail.com ಸ್ಥಿರ ದೂರವಾಣಿ ಸಂಖ್ಯೆ:080-23562033**

ಸಂಖ್ಯೆ: DPUE/EST10/PROM/3/2023-PLCY ದಿನಾಂಕ: 22-06-2023

## ಜ್ಞಾಪನ

**ವಿಷಯ:** ಪದವಿ ಪೂರ್ವ ಶಿಕ್ಷಣ ಇಲಾಖೆಯ ಅರ್ಹ ಪರಿಚಾರಕ ನೌಕರರಿಗೆ ದ್ವಿತೀಯ ದರ್ಜೆ ಸಹಾಯಕರ ಹುದ್ದೆಗೆ ಹಾಗೂ ಅರ್ಹ ಗ್ರೂಪ್-ಡಿ ನೌಕರರಿಗೆ ದ್ವಿತೀಯ ದರ್ಜೆ ಸಹಾಯಕ / ಪರಿಚಾರಕರ ಹುದ್ದೆಗಳಿಗೆ ಬಡ್ತಿ ನೀಡುವ ಬಗ್ಗೆ.

**ಉಲ್ಲೇಖ:**
1. ಈ ಕಚೇರಿ ಸಮ ಸಂಖ್ಯೆ ಅಧಿಕೃತ ಜ್ಞಾಪನ ದಿನಾಂಕ:09-03-2023
2. ಈ ಕಚೇರಿ ಸಮ ಸಂಖ್ಯೆ ಜ್ಞಾಪನ ದಿನಾಂಕ:03-06-2023

-*-

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖ-(1) ಮತ್ತು ಉಲ್ಲೇಖ-(2)ರಲ್ಲಿನ ಜ್ಞಾಪನಗಳ ಕಡೆ ಗಮನ ಸೆಳೆಯಲಾಗಿದೆ. ದ್ವಿತೀಯ ದರ್ಜೆ ಸಹಾಯಕರ ಹುದ್ದೆಯ ಬಡ್ತಿಗೆ ಅರ್ಹರಿರುವ ಗ್ರೂಪ್-ಡಿ ಮತ್ತು ಪರಿಚಾರಕ ನೌಕರರ ಪಟ್ಟಿಯನ್ನು, ಪರಿಚಾರಕರ ಹುದ್ದೆಯ ಬಡ್ತಿಗೆ ಅರ್ಹರಿರುವ ಗ್ರೂಪ್-ಡಿ ನೌಕರರ ಪಟ್ಟಿಯನ್ನು ಹಾಗೂ ಬಡ್ತಿ ನಿರಾಕರಿಸಿ ಮನವಿ ಸಲ್ಲಿಸಿರುವ ನೌಕರರ ಪಟ್ಟಿಯನ್ನು, ಇನ್ನು ಕೆಲವು ದಾಖಲೆಗಳು/ದೃಢೀಕರಣಗಳನ್ನು ಸಲ್ಲಿಸಬೇಕಾಗಿರುವಂತಹ ನೌಕರರ ಪಟ್ಟಿಯನ್ನು ಮತ್ತು ಯಾವುದೇ ಮಾಹಿತಿ / ದಾಖಲೆಗಳು ಸಲ್ಲಿಕೆಯಾಗದಿರುವಂತಹ ನೌಕರರ ಪಟ್ಟಿಯನ್ನು (ಅನುಬಂಧ-1 ರಿಂದ 7) ಉಲ್ಲೇಖ-(2)ರ ಜ್ಞಾಪನಕ್ಕೆ ಲಗತ್ತಿಸಿ ಎಲ್ಲಾ ಜಿಲ್ಲಾ ಉಪನಿರ್ದೇಶಕರ ಕಚೇರಿಗೆ ಇ-ಮೇಲ್ ಕಳುಹಿಸಿದ್ದು, ಸದರಿ ಪಟ್ಟಿಗಳಲ್ಲಿನ ವಿವರಗಳನ್ನು ಜಿಲ್ಲಾ ಉಪ ನಿರ್ದೇಶಕರು ಹಾಗೂ ಪ್ರಾಂಶುಪಾಲರುಗಳು ಪರಿಶೀಲಿಸಿ, ಯಾವುದೇ ವ್ಯತ್ಯಸ ಇದ್ದಲ್ಲಿ ಅದನ್ನು ಸರಿಪಡಿಸಿ, ಸೂಕ್ತ ದಾಖಲೆಗಳೊಂದಿಗೆ ಈ ಕಚೇರಿಗೆ ಸಲ್ಲಿಸುವುದು. ಅಲ್ಲದೇ ಯಾವುದೇ ಮಾಹಿತಿ / ದಾಖಲೆಗಳನ್ನು ಸಲ್ಲಿಸದಿರುವ ನೌಕರರ ವಿವರಗಳನ್ನು ಪರಿಶೀಲಿಸಿ ಸದರಿ ನೌಕರರು ಸೇವೆಯಲ್ಲಿ ಇದ್ದಾರೆಯೇ ಅಥವಾ ಇಲ್ಲವೇ ಎನ್ನುವುದರ ಬಗ್ಗೆ ಮಾಹಿತಿಯನ್ನು ಸಲ್ಲಿಸುವುದು. ಸೇವೆಯಲ್ಲಿದ್ದು, ಆದರೆ ಯಾವುದೇ ಮಾಹಿತಿ / ದಾಖಲೆ ನೀಡಲು ಇಚ್ಚೆಸದಿದ್ದಲ್ಲಿ ಅಂತಹ ನೌಕರರಿಂದ ಮನವಿ ಪಡೆದು ಸಲ್ಲಿಸುವುದು. ಸದರಿ ಪ್ರಕ್ರಿಯನ್ನು ಜರೂರಾಗಿ ಪೂರ್ಣಗೊಳಿಸಿ ಅಗತ್ಯ ದಾಖಲೆಗಳು/ದೃಢೀಕರಣಗಳನ್ನು ಕಡ್ಡಾಯವಾಗಿ ದಿನಾಂಕ:17-06-2023 ರೊಳಗಾಗಿ ಪದವಿ ಪೂರ್ವ ಶಿಕ್ಷಣ ನಿರ್ದೇಶನಾಲಯಕ್ಕೆ ಸಲ್ಲಿಸಲು ಸಂಬಂಧಪಟ್ಟ ಜಿಲ್ಲಾ ಉಪ ನಿರ್ದೇಶಕರಿಗೆ ಹಾಗೂ ಪ್ರಾಂಶುಪಾಲರುಗಳಿಗೆ ಸೂಚಿಸಲಾಗಿತ್ತು.

ಆದರೆ, ಇದುವರೆಗೆ ಅನುಬಂಧ-4 ರಲ್ಲಿನ ಕ್ರಮ ಸಂಖ್ಯೆ: 7, 8, 12, 23, 26 ಮತ್ತು 27 ರಲ್ಲಿನ ನೌಕರರ ದಾಖಲೆಗಳು ಮಾತ್ರ ಸ್ವೀಕೃತವಾಗಿದ್ದು, ಸದರಿ ಅನುಬಂಧದಲ್ಲಿನ ಇನ್ನುಳಿದ ನೌಕರರ ದಾಖಲೆಗಳು

ಸ್ವೀಕೃತವಾಗಿರುವುದಿಲ್ಲ. ಸದರಿ ದಾಖಲೆಗಳನ್ನು ಕೂಡಲೇ ಸಲ್ಲಿಸುವುದು. ಅಲ್ಲದೇ ಅನುಬಂಧ-5 ಮತ್ತು ಅನುಬಂಧ-7 ರಲ್ಲಿನ ನೌಕರರ ಕುರಿತು ಯಾವುದೇ ಮಾಹಿತಿಯು ಸ್ವೀಕೃತವಾಗಿರುವುದಿಲ್ಲ. ಉಲ್ಲೇಖ-(2)ರಲ್ಲಿ ಸೂಚಿಸಿರುವಂತೆ, ಜಿಲ್ಲಾ ಉಪ ನಿರ್ದೇಶಕರುಗಳು ಕೂಡಲೇ ವೈಯಕ್ತಿಕ ಗಮನಹರಿಸಿ ದಾಖಲೆ / ದೃಢೀಕರಣಗಳನ್ನು ದಿನಾಂಕ:26-06-2023 ರೊಳಗಾಗಿ ಈ ಕಚೇರಿಗೆ ಒದಗಿಸುವಂತೆ ಸೂಚಿಸಿದೆ. ತಪ್ಪಿದಲ್ಲಿ ಸಂಬಂಧಿಸಿದ ಜಿಲ್ಲಾ ಉಪ ನಿರ್ದೇಶಕರು / ಪ್ರಾಂಶುಪಾಲರನ್ನು ನೇರ ಹೊಣೆಗಾರರನ್ನಾಗಿ ಮಾಡಲಾಗುವುದು.

ಈ ಜ್ಞಾಪನವನ್ನು ಇಲಾಖೆಯ ಅಂತರ್ಜಾಲ **https://pue.karnataka.gov.in** ರಲ್ಲಿ ಪ್ರಕಟಿಸಲಾಗಿದೆ.

ಜಂಟಿ ನಿರ್ದೇಶಕರು (ಆಡಳಿತ)
ಪದವಿ ಪೂರ್ವ ಶಿಕ್ಷಣ ಇಲಾಖೆ

**ಪ್ರತಿಯನ್ನು:**

1. ನಿರ್ದೇಶಕರ ಆಪ್ತ ಶಾಖೆಗೆ.
2. ಸಂಬಂಧಿಸಿದ ಜಿಲ್ಲಾ ಉಪ ನಿರ್ದೇಶಕರುಗಳಿಗೆ - ಅಗತ್ಯ ಕ್ರಮಕ್ಕಾಗಿ.
3. ಸಹಾಯಕ ನಿರ್ದೇಶಕರು(ಇ-ಆಡಳಿತ), ಪದವಿ ಪೂರ್ವ ಶಿಕ್ಷಣ ಇಲಾಖೆ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ ಬೆಂಗಳೂರು-ಸಂಬಂಧಿಸಿದ ಕಚೇರಿಗೆ/ಕಾಲೇಜಿಗೆ ಇ-ಮೇಲ್ ಮಾಡುವುದು ಹಾಗೂ ಇಲಾಖಾ ಜಾಲತಾಣದಲ್ಲಿ ಪ್ರಕಟಿಸುವುದು.
4. ಸಂಬಂಧಿಸಿದ ಕಾಲೇಜಿನ ಪ್ರಾಂಶುಪಾಲರಿಗೆ, ಜಿಲ್ಲಾ ಉಪನಿರ್ದೇಶಕರ ಮೂಲಕ.
5. ಸಂಬಂಧಿಸಿದ ನೌಕರರಿಗೆ-ಸಂಬಂಧಿಸಿದ ಕಾಲೇಜಿನ ಪ್ರಾಂಶುಪಾಲರ ಮೂಲಕ.
6. ಪದವಿ ಪೂರ್ವ ಶಿಕ್ಷಣ ನಿರ್ದೇಶನಾಲಯದ ಸಂಬಂಧಿಸಿದ ನೌಕರರಿಗೆ.
7. ಕಚೇರಿ ಪ್ರತಿ.